



ಮನೆಗೆ, ಟಿವಿಗೆ, ಹೊಲಿಗೆ ಯಂತ್ರಕ್ಕೆ ಎಲ್ಲದಕ್ಕೂ ಸೌರಶಕ್ತಿ

## ಇದು ಇತ್ತೀಚೆಗಿನ ಶೋಧ

ಹಾಗೆ ನೋಡಿದರೆ ಅಸಾಂಪ್ರದಾಯಿಕ ಇಂಧನಗಳಲ್ಲಿ ಒಂದಾದ ಸೌರ ಶಕ್ತಿಯ ಕುರಿತು ತೀರ ಇತ್ತೀಚೆಗಿನವರೆಗೂ ಅಷ್ಟಾಗಿ ಗೊತ್ತಿರಲಿಲ್ಲ. ನಮ್ಮಲ್ಲಿ ಪರ್ಯಾಯ ಶಕ್ತಿಯ ಕುರಿತು ಚಿಂತನೆ ಹುಟ್ಟಿದ್ದೇ 70ರ ದಶಕದ ನಂತರ. ಕೈಗಾರೀಕರಣ, ನಗರೀಕರಣದ ಕ್ರಾಂತಿ ಮತ್ತು ಹೆಚ್ಚುತ್ತಿರುವ ಆಧುನಿಕ ಯಂತ್ರಗಳು, ಇದರಿಂದಾಗಿಯೇ ಹೆಚ್ಚುತ್ತಿರುವ ವಿದ್ಯುತ್ ಬೇಡಿಕೆ ಮತ್ತು ಬಳಕೆಯಿಂದಾಗಿ ಮತ್ತು ಬೇರೆ ಬೇರೆ ಕಾರಣಗಳಿಗಾಗಿ ಇಂದು ಜಾಗತಿಕ ತಾಪಮಾನ ಹೆಚ್ಚುತ್ತಿದೆ. ಪರಿಸರ ಮಲಿನವಾಗುತ್ತಿದೆ. ಕಾಡು ನಾಶವಾಗಿ, ಮಳೆ ಕಡಿಮೆಯಾಗುತ್ತಿದೆ. ಹೀಗೆ ಒಂದಕ್ಕೊಂದು ಪೂರಕವಾದ ಅನಾಹುತಗಳ ಸೃಷ್ಟಿಯಿಂದಾಗಿ ಇಂದು ಪರ್ಯಾಯ ಇಂಧನಗಳ ಬಳಕೆ ಹೆಚ್ಚುತ್ತಿದೆ.

ಇಂದು ಶಕ್ತಿ ಅಥವಾ ಇಂಧನ ನಮ್ಮ ಮೂಲ ಅವಶ್ಯಕತೆಗಳಲ್ಲಿ ಒಂದಾಗಿದೆ. ಅದರಲ್ಲೂ ವಿದ್ಯುತ್ ಇಲ್ಲದೆ ನಮ್ಮ ಬದುಕೇ ಇಲ್ಲವೆಂಬಂತಹ ಸ್ಥಿತಿಯಲ್ಲಿ ನಾವಿದ್ದೇವೆ. ಅತಿಯಾದ ಗ್ಯಾಜೆಟ್‌ಗಳ ಬಳಕೆ, ವಿದ್ಯುತ್‌ಅನ್ನು ಅತಿ ಹೆಚ್ಚು ಬೇಡುತ್ತಿದೆ. ಆದರೆ ಇಷ್ಟೊಂದು ಬಳಕೆ ಮತ್ತು ಬೇಡಿಕೆಯನ್ನು ಪೂರೈಸಲಾರದ ಸ್ಥಿತಿಯಲ್ಲೂ ಇದ್ದೇವೆ. ವಿದ್ಯುತ್ ಶಕ್ತಿ ಪಡೆಯಲು ಅನೇಕ ವಿಧಾನಗಳಿದ್ದು, ಈಗೀಗ ಸೌರ ವಿದ್ಯುತ್ ಜನಪ್ರಿಯತೆ ಪಡೆಯುತ್ತಿದೆ.



ಸುಮಂಗಲ ಪಾಟೀಲ

## ಏನಿದು ಸೌರಶಕ್ತಿ...?

ಸೂರ್ಯನ ಶಕ್ತಿಯನ್ನು ವಿದ್ಯುತ್ ಶಕ್ತಿಯನ್ನಾಗಿ ಪರಿವರ್ತಿಸುವುದು. ಸೌರಶಕ್ತಿಯನ್ನು ವಿದ್ಯುತ್ತಾಗಿ ಪರಿವರ್ತಿಸಲು ಬಳಸುವ ಉಪಕರಣವೇ ಸೌರ ಪಿ.ವಿ.ಫಲಕ ಅಥವಾ ಸೋಲಾರ್ ಪಿ.ವಿ.ಪ್ಯಾನೆಲ್. ಇದನ್ನು ಇದುವರೆಗೆ ದೀಪಗಳಿಗೆ, ವಾಟರ್ ಹೀಟರ್‌ಗಳಿಗೆ ಬಳಸಿದ್ದು ಯಶಸ್ವಿಯಾಗಿತ್ತು. ಈಗ ಇದನ್ನು ದಿನನಿತ್ಯದ ಇತರ ಅವಶ್ಯಕ ವಸ್ತುಗಳಿಗೂ ಅಳವಡಿಸಲಾಗುತ್ತಿದೆ.

ಸೌರ ವಿದ್ಯುತ್ ಅದೆಷ್ಟೋ ಜನರ ಜೀವವನ್ನೂ ಉಳಿಸಿದೆ, ಅದೆಷ್ಟೋ ಜನರ ಕತ್ತಲೆಯ ಬದುಕನ್ನು ಬೆಳಗಿಸಿದೆ.

‘ನನ್ನದು ಹುಲ್ಲಿನಿಂದ ಕಟ್ಟಿದ ಮನೆಯಾಗಿತ್ತು. ಆ ಮನೆಗೆ ಕರೆಂಟಿರಲಿಲ್ಲ. ಒಂದು ದಿನ ರಾತ್ರಿ ಚಿಮಣಿ ದೀಪ ಬಿದ್ದು ಅದು ಹೇಗೊ ಬೆಂಕಿ ಹತ್ತಿ, ಇಡೀ ಮನೆ ಸುಟ್ಟು ಭಸ್ಮವಾಯಿತು. ನನ್ನ ಮೂವರು ಮಕ್ಕಳೂ ನನ್ನ ಕಣ್ಣೆದುರೇ ಬೆಂದು ಹೋದರು. ಒಂದೊಮ್ಮೆ ಅಲ್ಲಿ ಕರೆಂಟ್ ಇದ್ದಿದ್ದರೆ, ಹೀಗೆ ಬೆಂಕಿ ಹತ್ತಿಕೊಂಡು ನನ್ನ ಮಕ್ಕಳು ಬೆಂದುಹೋಗುತ್ತಿರಲಿಲ್ಲ..’

—ಹೀಗೆ ಗದ್ಗದಿತನಾಗಿ ಹೇಳುವ ವೇದನಾಥ್ ಮನೆ, ಮುಂಬೈನಿಂದ 24 ಕಿ.ಮೀ ದೂರದಲ್ಲಿರುವ ಒಂದು ಕೊಳಗೇರಿ ಪ್ರದೇಶದ ಜೋಪಡಿಸಾಲಿನಲ್ಲಿದೆ. ಅಲ್ಲಿ ವಿದ್ಯುತ್ ಇಲ್ಲ. ಕರೆಂಟ್ ಲೈನ್ ಎಳೆಯಲೂ ಸಾಧ್ಯವಿಲ್ಲ. ಯಾಕೆಂದರೆ ಆ ಪ್ರದೇಶ ಸರ್ಕಾರದ ಅಧಿಕೃತ ಪ್ರದೇಶವಲ್ಲ. ಹಾಗಾಗಿ ಅವರಿಗೆ ಯಾವುದೇ ಗುರುತಿನ ಚೀಟಿಯೂ ಇಲ್ಲ. ಹೀಗೆ ದೇಶದ ಸಾಕಷ್ಟು ಜನರಿಗೆ ಬೆಳಕಿನದ್ದೇ ಸಮಸ್ಯೆ.

ವಿಶ್ವಾದ್ಯಂತ ಇಂದು ಅದೆಷ್ಟೋ ಜನ ವಿದ್ಯುತ್ ದೀಪವಿಲ್ಲದೆ ಚಿಮಣಿ ದೀಪದಲ್ಲೇ ಕಾಲ ಕಳೆಯುತ್ತಿದ್ದಾರೆ. ಇದರಿಂದ ಅವರ ಬದುಕು ಅಸಹನೀಯವಾಗಿದೆ. ಜಗತ್ತಿಗೆಲ್ಲಾ ಕರೆಂಟಿನ ಬೆಳಕಿದ್ದರೂ ಕೆಲವರ ಮನೆಯಲ್ಲಿ ಮಾತ್ರ ಕತ್ತಲು. ಕತ್ತಲಿರುವ ಕಾರಣಕ್ಕಾಗಿಯೇ ಅವರ ಬದುಕು ಸುಧಾರಣೆಯಾಗುವುದಿಲ್ಲ. ಮಕ್ಕಳು ಓದುವುದಿಲ್ಲ. ಮನೆಗೆಲಸ ಪೂರ್ತಿಯಾಗುವುದಿಲ್ಲ. ರಾತ್ರಿ ಹೊತ್ತು ಹಣ್ಣು ವ್ಯಾಪಾರ, ಹೊಲಿಗೆ,